**ದಿನಾಂಕ : 23–10–2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು :– ಪ್ರತಿವಾದಿಯ ಪರ ಶ್ರೀ. ಜಿ ವಿ . ವಕೀಲರಿಂದ** :–

ದಿನಾಂಕ 08.02.2022 ರಂದು ದಾವೆ ಸಲ್ಲಿಸುವ ಸಮಯದಲ್ಲಿ ನಿಮ್ಮ ಹೆಸರಿಗೆ ಕ್ರಯಪತ್ರ ಹೊರತು ಪಡಿಸಿ ಬೇರೆ ಯಾವುದೇ ಕಂದಾಯ ದಾಖಲೆಗಳು ಇದ್ದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವೆ ಸಲ್ಲಿಸಿದ ನಂತರವೂ ನಿಮ್ಮ ಹೆಸರಿಗೆ ಕಂದಾಯ ದಾಖಲೆಗಳು ಆಗಿರುವುದಿಲ್ಲ ಎಂದರೆ ಸಾಕ್ಷಿ ನಾವು ಅರ್ಜಿ ಸಲ್ಲಿಸಿದ್ದು ಅದು ಚಾಲ್ತಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಹೆಸರಿಗೆ ಖಾತೆ ಆಗಬಾರದು ಎಂದು ಪ್ರತಿವಾದಿಯು ಮಾನ್ಯ ತಹಸಿಲ್ದಾರ್ ರವರಿಗೆ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ನಾನು ಎ.ಸಿ. ನ್ಯಾಯಾಲಯಕ್ಕೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಎ.ಸಿ. ನ್ಯಾಯಾಲಯದಿಂದ ಆದೇಶವಾಗಿರುತ್ತದೆ ಎಂದು ನುಡಿಯುತ್ತಾರೆ. ಮಾನ್ಯ ಎ ಸಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾವೆಯಲ್ಲಿ 1 ನೇ ಪ್ರತಿವಾದಿಯವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಾನ್ಯ ಎ ಸಿ ನ್ಯಾಯಾಲಯದಲ್ಲಿ ಆದೇಶವಾದ ನಂತರ ನಿಮ್ಮ ಹೆಸರಿಗೆ ಪಹಣಿ ಬಂದಿರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಅದು ಚಾಲ್ತಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

ಪ್ರಸ್ತುತ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಮಾನ್ಯ ಎ ಸಿ ನ್ಯಾಯಾಲಯದಲ್ಲಿ ಆದೇಶ ಆಗಿತ್ತ ಎಂದರೆ ಸಾಕ್ಷಿ ಇಲ್ಲ ಎಂದು

ನುಡಿಯುತ್ತಾರೆ. 1 ನೇ ಪ್ರತಿವಾದಿಯನ್ನು ಸದರಿ ಮಾನ್ಯ ಎ.ಸಿ ನ್ಯಾಯಾಲಯದ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನೀವು ಸದರಿ ಉಪವಿಭಾಗಾಧಿಕಾರಿಗಳೊಂದಿಗೆ ಶಾಮೀಲಾಗಿ ಸದರಿ ಆದೇಶವನ್ನು ಪ್ರಸ್ತುತ ದಾವೆಗೋಸ್ಕರ ಮಾಡಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ದಾವೆಯಲ್ಲಿ ಕ್ರಯಪತ್ರವನ್ನು ಹೊರತು ಪಡಿಸಿ ನಿಮ್ಮ ಸ್ವಾಧೀನವನ್ನು ತೋರಿಸಲು ಆರ್ ಟಿ ಸಿ ಮ್ಯುಟೇಷನ್ ಪಟ್ಟಾ ಬುಕ್ ಮತ್ತು ಇತರ ಕಂದಾಯ ದಾಖಲೆಗಳನ್ನು ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ದಾವಾಸ್ವತ್ತನ್ನು ಕರೀದಿ ಮಾಡುವ ಪೂರ್ವದಲ್ಲಿ ಮುನಿರಾಜು ರವರಿಗೆ ದಾವಾಸ್ವತ್ತು ಹೇಗೆ ಬಂದಿರುತ್ತದೆ ಎಂದು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು ಅದು ಅವರ ಸ್ವಯಾರ್ಜಿತ ಸ್ವತ್ತಾಗಿದ್ದು ಅವರು ಕರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಪಿ–1 ಅನ್ನು ತೋರಿಸಲಾಗಿ ಸದರಿ ನಿಪಿ–1 ರ ಕ್ರಯಪತ್ರದಲ್ಲಿ ಮುನಿರಾಜುರವರ ಸ್ವಯಾರ್ಜಿತ ಸ್ವತ್ತು ಎಂದು ಬರೆದಿರುತ್ತದೆಯೆ ಎಂದರೆ ಸಾಕ್ಷಿ ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಿ–2 ರ ದಾನಪತ್ರದಲ್ಲೂ ಸಹ ಮುನಿರಾಜುರವರ ಸ್ವಯಾರ್ಜಿತ ಸ್ವತ್ತು ಎಂದು ಬರೆದಿರುತ್ತದೆಯೇ ಎಂದರೆ ಸಾಕ್ಷಿ ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ.

ಹೆಮ್ಮಿಗೆಪುರದ ಬನಶಂಕರಿ 6 ನೇ ಹಂತದಲ್ಲಿ ಇದ್ದ ತಮ್ಮ ಒಟ್ಟು ಕುಟುಂಬದ ಸ್ವತ್ತು ಬಿಡಿಎ ರವರು ಸ್ವಾಧಿನ ಪಡಿಸಿಕೊಂಡಾಗ ಸದರಿ ಸ್ವಾಧೀನ ಪಡಿಸಿಕೊಂಡು ಬಂದಂತಹ ಹಣದಿಂದ ಸದರಿ ಮುನಿರಾಜುರವರು 2010 ರಲ್ಲಿ ದಾವಾಸ್ವತ್ತನ್ನು ಕರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವಾಸ್ವತ್ತನ್ನು ಕರೀದಿ ಮಾಡುವ ಸ ಮಯದಲ್ಲಿ ದಾವಾಸ್ವತ್ತು ಮುನಿರಾಜುರವರ ಸ್ವಯಾರ್ಜಿತ ಸ್ವತ್ತೋ ಅಥವಾ ಒಟ್ಟು ಕುಟುಂಬದ ಸ್ವತ್ತೊ ಎಂದು ಪರಿಶೀಲಿಸಲು ನಿಮಗೆ

ಏನು ಸಮಸ್ಯೆ ಇದ್ದಿರಲಿಲ್ಲವಾ ಎಂದರೆ ಸಾಕ್ಷಿ ಏನು ಸಮಸ್ಯೆ ಇದ್ದಿರಲಿಲ್ಲ ಕಾರಣ ದಾವಾಸ್ವತ್ತು ರಕ್ಷಿತರವರ ಸ್ವಯಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ದಾವಾಸ್ವತ್ತನ್ನು ಒಟ್ಟು ಕುಟುಂದ ಮೂಲ ಆದಾಯದಿಂದ ಸದರಿ ಮುನಿರಾಜುರವರು ಕರೀದಿ ಮಾಡಿದ್ದರಿಂದ ಸದರಿ ಮುನಿರಾಜುರವರಿಗೆ ರಕ್ಷಿತ ರವರಿಗೆ ದಾನಪತ್ರ ಮಾಡಿಕೊಡಲು ಯಾವುದೇ ಹಕ್ಕು ಇದ್ದಿರಲಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಅದು ಅವರು ತೀರ್ಮಾನ ಮಾಡಬೇಕು ಎಂದು ನುಡಿಯುತ್ತಾರೆ. ದಾವಾಸ್ವತ್ತು ಮುನಿರಾಜುರವರ ಒಟ್ಟು ಕುಟುಂಬದ ಸ್ವತ್ತು ಆದ್ದರಿಂದಲೇ ಸದರಿ ಮುನಿರಾಜುರವರು ನಿಪಿ–2 ರ ದಾನಪತ್ರದಲ್ಲಿ ಹಾಗೂ ನಿಪಿ–1 ರ ಕ್ರಯಪತ್ರದಲ್ಲಿ ಸ್ವಯಾರ್ಜಿತ ಸ್ವತ್ತು ಎಂದು ನಮೂದು ಮಾಡಿರುವುದಿಲ್ಲ ಎಂರದೆ ಸಾಕ್ಷಿ ನಮೂದು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಮಗೆ ಯಾವ ದಿನಾಂಕದಂದು ಕ್ರಯಪತ್ರ ಆಗಿರುತ್ತದೆ ಎಂದರೆ ಸಾಕ್ಷಿ ದಿನಾಂಕ 19.11.2021 ಎಂದು ನುಡಿಯುತ್ತಾರೆ. ನಿಮಗೆ ರಕ್ಷಿತ ರವರು ಕ್ರಯಪತ್ರ ಮಾಡಿಕೊಡುವ ದಿನದಂದೇ ಸದರಿ ರಕ್ಷಿತ ರವರು ವರಲಕ್ಷ್ಮೀ ರವರಿಗೆ ಆದಂತಹ ಕ್ರಯದ ಕರಾರುಪತ್ರದ ರದ್ದತಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಧೃಡೀಕೃತ ನಕಲಿನ ಸದರಿ ಕ್ರಯದ ಕರಾರುಪತ್ರದ ರದ್ದಿಯಾತಿ ಪತ್ರವನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು **ಅದನ್ನು ನಿಡಿ–12 ಎಂದು** ಗುರುತಿಸಲಾಯಿತು. ಸದರಿ ವರಲಕ್ಷ್ಮೀ ರವರಿಗೆ ಆದಂತಹ ಕರಾರುಪತ್ರವನ್ನು 1 ನೇ ಪ್ರತಿವಾದಿಯು ತಾನು ಸಲ್ಲಿಸಿದ್ದ ಪಾಲುವಿಭಾಗದ ದಾವೆಯಲ್ಲಿ ಹಾಜರು ಪಡಿಸಿದ್ದರಿಂದ ಸದರಿ ರಕ್ಷಿತ ರವರು ಕರಾರು ರದ್ದತಿ ಪತ್ರವನ್ನು ಸದರಿ ವರಲಕ್ಷ್ಮೀ ರವರಿಗೆ ಮಾಡಿಕೊಟ್ಟ ನಂತರ ನಿಮಗೆ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಹಾಗೂ 1 ನೇ ಪ್ರತಿವಾದಿಗೆ ಮೋಸ

ಮಾಡಬೇಕೆಂಬ ಉದ್ದೇಶದಿಂದ ನೀವು, ರಕ್ಷಿತ ಹಾಗೂ ವರಲಕ್ಷ್ಮೀ ರವರು ಸದರಿ ನಿಪಿ-3 ರ ಕ್ರಯಪತ್ರವನ್ನು ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ನಿಮ್ಮ ವಾದಪತ್ರದ ಪ್ಯಾರಾ 10 ರಲ್ಲಿ ದಿನಾಂಕ 16.01.2022 ರಂದು 1 ರಿಂದ 3 ನೇ ಪ್ರತಿವಾದಿಗಳು ವಾಟರ್ ಪೈಪ್ಸ್ ಗಳನ್ನು ಮತ್ತು ವಾಟರ್ ಪಂಪುಗಳನ್ನು ಕಳ್ಳತನ ಮಾಡಿರುತ್ತಾರೆ ಎಂದು 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಪೋಲಿಸ್ ದೂರನ್ನು ಕೊಟಿಸ್ಟಿರುತ್ತೇನೆ ಎಂದು ಹೇಳಿದ್ದು ನೀವು ದಿನಾಕ 16.01.2022 ರಂದು ದಾವಾಸ್ವತ್ತಿನಲ್ಲಿ ಹಾಜರು ಇದ್ದಿರಲಿಸಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದೂರಿನ ಪ್ರತಿಯನ್ನು ನೀವು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಹಾಗೂ ಸದರಿ ದೂರು ನಿಮ್ಮ ಪರವಾಗಿ ಗುರುತಿಸಲಾಗಿರುತ್ತದೆಯೇ ಎಂದರೆ ಸಾಕ್ಷಿ ನಿಪಿ- 1 ರಿಂದ 48 ರ ದಾಖಲೆಗಳನ್ನು ನೋಡಿ ಇದರಲ್ಲಿ ಇರುವುದಿಲ್ಲ ಮಿಸ್ ಪ್ಲೇಸ್ ಅಗಿರಬಹುದು ಆದರೆ ನಾನು ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದೂರಿನ ಮೇಲೆ ಪೋಲಿಸರು ಪ್ರಥಮ ವರ್ತಮಾನ ವರಧಿಯನ್ನು ದಾಖಲಿಸಿರುತ್ತಾರಾ ಅಥವಾ ತನಿಖೆಯನ್ನು ಮಾಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಪೋಲಿಸರು ಪ್ರಥಮ ವರ್ತಮಾನ ವರಧಿಯನ್ನು ದಾಖಲಿಸದೇ ಇದ್ದ ಸಂಬಂಧ ನೀವು ಏನಾದರೂ ಕ್ರಮ ಕೈಗೊಂಡಿರುತ್ತೀರಾ ಎಂದರೆ ಸಾಕ್ಷಿ ಪುನಃ ದಿನಾಕ 31.01.2022 ರಂದು ದೂರನ್ನು ಕೊಟ್ಟಿರುತ್ತೇನೆ ಆಗ ಪೋಲಿಸರು ಪ್ರತಿವಾದಿ 1 ರಿಂದ 3 ರವರನ್ನು ಕರೆಸಿದ್ದರು ಆಗ ಪ್ರತಿವಾದಿಗಳು ನಾವು ಸದರಿ ವೈಯರ್ ಮತ್ತು ಪಂಪುಗಳನ್ನು ಕರೀದಿ ಮಾಡಿರುತ್ತೇವೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಬಿಲ್ ಅನ್ನು ತೋರಿಸಲಾಗಿ ಸದರಿ ಬಿಲ್ ಅನ್ನು 1 ನೇ ಪ್ರತಿವಾದಿಯು ಪೋಲಿಸ್ ಠಾಣೆಗೆ ಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಆದರೆ ಅದು ಸೃಷ್ಟಿತ ಬಿಲ್

ಎಂದು ನುಡಿಯುತ್ತಾರೆ. ಸದರಿ **ಬಿಲ್ ಅನ್ನು ನಿಡಿ–13 ಎಂದು** ಗುರುತಿಸಲಾಯಿತು.

ಸದರಿ ದೂರನ್ನು ಕೊಟ್ಟ ನಂತರ ಸದರಿ ದೂರು ಎಸ್ ಸಿ ಆರ್ ಆಗಿರುತ್ತದೆಯೋ ಅಥವಾ ಎಫ್ ಐ ಆರ್ ಆಗಿರುತ್ತದೆಯೋ ಎಂದು ನಿಮಗೆ ಮಾತಿಹಿ ಇದೆಯೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 31.01.2022 ರಂದು 1 ರಿಂದ 3 ನೇ ಪ್ರತಿವಾದಿಗಳು ಪೋಲಿಸ್ ಠಾಣೆಗೆ ಬಂದಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಿನದಂದು ನಿಮ್ಮ ಹಾಗೂ 1 ರಿಂದ 3 ನೇ ಪ್ರತಿವಾದಿಗಳ ನಡುವೆ ಏನಾದರೂ ಮಾತುಕತೆ ಆಯಿತ ಎಂದರೆ ಸಾಕ್ಷಿ ಪ್ರತಿವಾದಿಗಳು ನನಗೆ ಪೋಲಿಸ್ ಠಾಣೆಯ ಎದುರುಗಡೆ ಜೀವಬೆದರಿಕೆ ಹಾಕಿದರು ಆ ಕಾರಣ ಪ್ರತಿವಾದಿಗಳ ವಿರುದ್ದ ಪುನಃ ದೂರನ್ನು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಿನದಂದು ಪೋಲಿಸ್ ಠಾಣೆಯ ಹತ್ತಿರ ಗಲಾಟೆ ಆಗಿದ್ದು ಹೊರತು ಪಡಿಸಿ ಬೇರೆ ಯಾವುದೇ ಗಲಾಟೆ ಆಗಿರುವುದಿಲ್ಲವಾ ಎಂದರ್ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಪ್ರಸ್ತುತ ದಾವೆಯನ್ನು ಸಲ್ಲಿಸಿದ ನಂತರ 1 ನೇ ಪ್ರತಿವಾದಿಯವರು ತೋಟದಲ್ಲಿ ಮಾವಿನಕಾಯಿ ಕೀಳುವಾಗ ನಿಮ್ಮ ಹಾಗೂ 1 ನೇ ಪ್ರತಿವಾದಿಯ ನಡುವೆ ಗಲಾಟೆ ಆಗಿರುತ್ತದೆ ಎಂದರೆ ಸಾಕ್ಷಿ ಗಲಾಟೆ ಆಗಿರುವುದಿಲ್ಲ ಪ್ರತಿವಾದಿಗಳೇ ನನಗೆ ಬೆದರಿಕೆ ಹಾಕಿದ್ದರು ಆಗ ಗ್ರಾಮದವರು ನಮ್ಮ ರಕ್ಷಣೆಗೆ ಬಂದಿದ್ದರು ಎಂದುನುಡಿಯುತ್ತಾರೆ. ಸದರಿ ದಿನದಂದು 1 ನೇ ಪ್ರತಿವಾದಿಯು ಎಲ್ಲಾ ಮಾವಿನ ಕಾಯಿಗಳನ್ನು ಕಿತ್ತುಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ದಾವಾಸ್ವತ್ತನ್ನು ಕರೀದಿ ಮಾಡಿದಾಗಿನಿಂದ ಇಲ್ಲಿಯವರೆಗೂ ಪ್ರತೀವರ್ಷ 1 ನೇ ಪ್ರತಿವಾದಿಯವರೇ ಮಾವಿನ ಕಾಯಿಗಳನ್ನು ಕಿತ್ತುಕೊಂಡು ಹೋಗುತ್ತಿದ್ದಾರೆ ಎಂದರೆ ಸಾಕ್ಷಿ ಅದು

ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ದಾವಾಸ್ವತ್ತನ್ನು ಕರೀದಿ ಮಾಡುವ ಪೂರ್ವದಿಂದಲೂ ಹಾಗೂ ಇಲ್ಲಿಯವರೆಗೂ ಪ್ರತೀವರ್ಷ 1ನೇ ಪ್ರತಿವಾದಿಯವರೇ ಮಾವಿನ ಬೆಳೆಯನ್ನು ಕೀಳುತ್ತಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ದಿನಾಂಕ 31.01.2022 ರಂದು 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ದೂರನ್ನು ಕೊಟ್ಟಿರುತ್ತೇನೆ ಎಂದು ಹೇಳಿದ್ದು ಸದರಿ ದೂರು ಏನು ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದೂರು ಎಫ್ ಐ ಆರ್ ಆಗಿರುತ್ತದೆಯೋ ಅಥವಾ ಎಸ್ ಸಿ ಆರ್ ಆಗಿರುತ್ತದೆಯೋ ಎಂದು ವಿಚಾರ ಮಾಡಿರುವುದಿಲ್ಲವಾ ಎಂದರೆ ಸಾಕ್ಷಿ ವಿಚಾರ ಮಾಡಿದ್ದು ಅಸಲು ದಾವೆ ನಂ .34/2022 ದಾವೆ ಸಲ್ಲಿಸಿದ್ದು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಪೋಲಿಸರು ನಿಮಗೆ ಹಿಂಬರಹ ನೀಡಿರುತ್ತಾರೆ ಎಂದರೆ ಸಾಕ್ಷಿ 2023 ರಲ್ಲಿ ಎಂದು ನುಡಿಯುತ್ತಾರೆ. ದಾವೆಯನ್ನು ಸಲ್ಲಿಸುವ ದಿನಾಂಕದಂದು ಹಿಂಬರಹ ನೀಡಿರುವುದಿಲ್ಲವಾ ಎಂದರೆ ಸಾಕ್ಷಿ ಯು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದೂರಿನ ವಿರುದ್ಧ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಸಲ್ಲಿಸಿ 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಎಫ್ ಐ ಆರ್ ದಾಖಲಿಸಲು ನಿಮಗೆ ಏನು ತೊಂದರೆ ಇದ್ದಿರಲಿಲ್ಲವಾ ಎಂದರೆ ಸಾಕ್ಷಿ ಏನು ತೊಂದರೆ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ದಾವ್ವಾತ್ತನ್ನು 1ನೇ ಪ್ರತಿವಾದಿಯ ತಂದೆಯವರು ಕರೀದಿ ಮಾಡಿದಾಗಿನಿಂದ 1ನೇ ಪ್ರತಿವಾದಿಯವರೇ ದಾವಾಸ್ವತ್ತಿನಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದು ಇಂದಿನವರೆಗೂ 1 ನೇ ಪ್ರತಿವಾದಿಯವರೇ ದಾವಾಸ್ವತ್ತಿನಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಮೊದಲು ಮುನಿರಾಜುರವರು ವ್ಯವಸಾಯ ಮಾಡುತ್ತಿದ್ದರು, ನಂತರ ರಕ್ಷಿತರವರು ವ್ಯವಸಾಯ

ಮಾಡುತ್ತಿದ್ದರು, ಕರೀದಿ ಮಾಡಿದ ನಂತರ ನಾನು ವ್ಯವಸಾಯ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನೀವು ದಾವಾಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದೇನೆ ಎಂದು ಹೇಳಿದ್ದು ಆ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಪ್ರತಿ**ವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀಸವಾಲಿಗೆ ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**